ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕಂದಾಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE : 12/6/2020

### ಭೂ ಸುಧಾರಣಾ ಕಾಯಿದೆ 63 ಎ, 79ಕ್ಕೆ ತಿದ್ದುಪಡಿ | ಗ್ರಾಪಂಗಳಿಗೆ ಆಡಳಿತಾಧಿಕಾರಿಗಳ ನೇಮಕ | ವಿವಿಧ ಮೊಕದ್ದಮೆ ವಾಪಸ್ಸು ಪಡೆಯಲು ಸಚಿವ ಸಂಪುಟ ಗ್ರೀನ್ ಸಿಗ್ನಲ್

# ಕೃಷಿ ಭೂಮಿ ಖರೀದಿ ನಿರ್ಬಂಧ ರದ್ದು

12/6/20

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜ್ಯದ ರೈತರ ಹಿತ ಕಾಯುವ ನೆಪದಲ್ಲಿ ಇದೀಗ ರಾಜ್ಯ ಸರಕಾರ, ಭೂ ಸುಧಾರಣಾ ಕಾಯಿದೆಗೆ ತಿದ್ದುಪಡಿ ತರಲು ಮುಂದಾಗಿದೆ. ಇದರಲ್ಲಿ ಕೃಷಿಯೇತರ ಚಟುವಟಿಕೆಯಲ್ಲಿರುವವರೂ ಕೃಷಿ ಭೂಮಿ ಪಡೆಯಲು ಅವಕಾಶ ಕಲ್ಪಿಸಲು ಮುಂದಾಗಿರುವುದು ಇದೀಗ ಕೃಷಿಕರಲ್ಲಿ ಆತಂಕಕ್ಕೆ ಕಾರಣವಾಗಿದೆ.

ಇಷ್ಟು ದಿನ ಕೃಷಿ ಜಮೀನು ಪಡೆಯುವುದಕ್ಕೆ ಹಲವು ಕಟ್ಟಲೆಗಳಿದ್ದವು. ಇದರೊಂದಿಗೆ ವ್ಯಾಪಾರಿಗಳು ಕೃಷಿ ಜಮೀನು ಖರೀದಿಸಲು ಅವಕಾಶ ನೀಡಿರಲಿಲ್ಲ. ಆದರೀಗ ಕೃಷಿ ಜಮೀನು ಖರೀದಿಸಲು ವಿಧಿಸಲಾಗಿದ್ದ ನಿರ್ಬಂಧಗಳನ್ನು ತೆಗೆದು ಹಾಕಿ, ಯಾರು ಬೇಕಾದರೂ ಕೃಷಿ ಜಮೀನನ್ನು ಖರೀದಿಸಿ ಕೃಷಿ ಮಾಡಲು ಅವಕಾಶ ನೀಡುವ ಹೊಸ ಕಾನೂನನ್ನು ಜಾರಿ ಮಾಡಲು ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ.

ಭೂ ಸುಧಾರಣಾ ಕಾಯಿದೆಯಲ್ಲಿ ತಿದ್ದುಪಡಿ ತರಲು ರಾಜ್ಯ ಸರಕಾರ ನಿರ್ಧರಿಸಿದ್ದು, ಇದನ್ನು ಮುಂದಿನ ಅಧಿವೇಶನದಲ್ಲಿ ಮಂಡಿಸಿ, ಒಪ್ಪಿಗೆ ಪಡೆಯಲು ನಿರ್ಧರಿಸಲಾಗಿದೆ. ಆದರೆ ಈ ರೀತಿಯ ತಿದ್ದುಪಡಿಯಿಂದ ಭವಿಷ್ಯದಲ್ಲಿ ಕೃಷಿ ಚಟುವಟಿಕೆಗೆ ಹೊಡೆತ ಬೀಳುವ ಆತಂಕವನ್ನು ಕೆಲವರು ಹೊರಹಾಕಿದ್ದಾರೆ.

ಸಚಿವ ಸಂಪುಟ ಸಭೆಯ ನಂತರ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಮತ್ತು ಕಂದಾಯ ಸಚಿವ ಆರ್.ಅಶೋಕ, 'ಭೂ 'ಸುಧಾರಣಾ ಕಾಯಿದೆಯಲ್ಲಿ ಜಾರಿಯಲ್ಲಿದ್ದ 63 ಎ, 79 ಎ, ಬಿ, ಸಿ ಕಾನೂನುಗಳನ್ನು ರದ್ದು ಮಾಡಿ ಹೊಸ ಕಾನೂನು ಜಾರಿಗೊಳಿಸಲು ನಿರ್ಧರಿಸಲಾಗಿದೆ. ಈಗಾಗಲೇ ಅನೇಕ ಬಾರಿ ಭೂ ಸುಧಾರಣಾ ಕಾಯಿದೆಗಳು ಬದಲಾಗಿವೆ. ಜತೆಗೆ ಇವುಗಳಿಂದ ರೈತರಿಗೂ ಅನುಕೂಲಕ್ಕಿಂತ ಕಿರುಕುಳಗಳೇ ಹೆಚ್ಚಾಗಿವೆ. ಹಾಗೆಯೇ ನ್ಯಾಯಾಲಯಗಳಲ್ಲೂ ವ್ಯಾಜ್ಯಗಳು ಸಾಕಷ್ಟಿವೆ. ಇದಕ್ಕೆಲ್ಲ ಪರಿಹಾರವಾಗಿ ಈಗಿನ ಭೂ ಕಾಯಿದೆ ರದ್ದು ಮಾಡಿ ಹೊಸ ಕಾಯಿದೆ ರೂಪಿಸಲು ಸಂಪುಟ ಒಪ್ಪಿಗೆ ನೀಡಲಾಗಿದೆ' ಎಂದರು.

**ಸುಗ್ರೀವಾಜ್ಞೆ ಮೂಲಕ ಪಾಸ್ ಮಾಡಲ್ಲ:** 'ಮುಂದಿನ ವಿಧಾನಸಭೆಯ ಅಧಿವೇಶನದಲ್ಲಿ ಈ ಹೊಸ ಭೂ ಸುಧಾರಣಾ ಕಾಯಿದೆಯನ್ನು ಮಂಡಿಸಿ ಅನುಮೋದನೆ ಪಡೆಯಲಾಗುವುದು. ಈ ಕಾಯಿದೆ ಜಾರಿಗೆ ಸುಗ್ರೀವಾಜ್ಞೆ ಹೊರಡಿಸುವ ಆತುರದ ತೀರ್ಮಾನ ಕೈಗೊಳ್ಳಲಾಗದು. ನೂತನ ಕಾಯಿದೆಯಿಂದ ಇತರ ರಾಜ್ಯಗಳಲ್ಲಿರುವಂತೆ, ಕರ್ನಾಟಕದಲ್ಲೂ ಕೃಷಿಕರಲ್ಲದವರು ಕೃಷಿ ಜಮೀನನ್ನು ಖರೀದಿಸಿ ಕೃಷಿ ಮತ್ತಿತರ ಚಟುವಟಿಕೆಗಳನ್ನು ನಡೆಸಬಹುದಾಗಿದೆ' ಎಂದರು.

'ಈ ಮೊದಲು 2 ಲಕ್ಷಕ್ಕಿಂತ ಹೆಚ್ಚು ಕೃಷಿಯೇತರ ಆದಾಯ ಇರುವವರು ಕೃಷಿ ಜಮೀನನ್ನು ಖರೀದಿಸುವಂತಿರಲಿಲ್ಲ. ನಂತರ ಆದಾಯದ ಮಿತಿಯನ್ನು 25 ಲಕ್ಷಕ್ಕೆ ಏರಿಸಲಾಗಿತ್ತು. ಈಗ ಇದನ್ನೆಲ್ಲ ರದ್ದು ಮಾಡಿ ಕೃಷಿ ಜಮೀನು ಖರೀದಿಸಲು ಅವಕಾಶ ಮಾಡಿಕೊಡುವ ಕಾನೂನು ಜಾರಿ ಮಾಡಲಾಗುವುದು. ಇದರಿಂದ ರೈತರು ಸಹ ತಮ್ಮ ಜಮೀನಿಗೆ ಒಳ್ಳೆಯ ಬೆಲೆ ಪಡೆಯಲಿದ್ದಾರೆ. ಹಾಗೆಯೇ ಈ ಸಂಬಂಧ ಸುಳ್ಳು ದಾಖಲೆಗಳು, ಪ್ರಮಾಣ ಪತ್ರ ನೀಡಿ ಕೃಷಿ ಜಮೀನು ಖರೀದಿಸುವ ವ್ಯವಹಾರಗಳು ನಿಲ್ಲಲಿವೆ' ಎಂದರು.

## ಕಾಯಿದೆಯಲ್ಲಿ ಏನೇನು?

- ಕೃಷಿ ಜಮೀನು ಖರೀದಿಸಲು ಆದಾಯ ಮಿತಿಯಿಲ್ಲ
- ಕೃಷಿಯೇತರ ಚಟುವಟಿಕೆಯಲ್ಲಿರುವವರು ಕೃಷಿ ಜಮೀನು ಖರೀದಿಸಲು ಅರ್ಹ
- ಕೃಷಿಕರಲ್ಲದವರು ಭೂಮಿ ಖರೀದಿಗೆ ಅರ್ಹ
- ಈಗಿರುವ ಭೂಮಿ ಖರೀದಿಗೆ 25 ಲಕ್ಷ ಆದಾಯ ಮಿತಿ ರದ್ದು
- ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗೆ ಅವಕಾಶ

## ಸಚಿವ ಸಂಪುಟದ ಪ್ರಮುಖ ಅಂಶಗಳು

- ರೈತ ಚಳವಳಿ, ಕನ್ನಡ ಚಳವಳಿ ಹಾಗೂ ಗಣಪತಿ ವಿಸರ್ಜನೆಯಂತಹ ಗಲಾಟೆಯಂತಹ 53 ಪ್ರಕರಣ ವಾಪಸ್.
- 47 ತಾಲೂಕುಗಳ 1,307 ಆರೋಗ್ಯ ಉಪಕೇಂದ್ರಗಳನ್ನು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲು ನಿರ್ಧಾರ.
- ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯಕ್ಕೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಎಂದು ಹೆಸರಿಡಲು ಒಪ್ಪಿಗೆ.
- ಬೆಂಗಳೂರಿನ ಸರಕಾರಿ ವಿಜ್ಞಾನ ಕಾಲೇಜಿಗೆ ಕ್ಲಸ್ಟರ್ ವಿವಿ ಸ್ಥಾನಮಾನ ನೀಡಿ ಮೇಲ್ದರ್ಜೆಗೇರಿಸಲು ಸಂಪುಟ ಒಪ್ಪಿಗೆ
- ಹಾಸನ ಹಾಗೂ ಸಿಂದಗಿಯಲ್ಲಿ ತೋಟಗಾರಿಕಾ ಕಾಲೇಜಿನ ಸ್ಥಾಪನೆ ಸದ್ಯಕ್ಕೆ ಬೇಡವೆಂದು ನಿರ್ಧಾರ
- ಸಹಕಾರಿ ಸಕ್ಕರೆ ಕಾರ್ಖಾನೆಗಳ ಚುನಾವಣೆಗಳನ್ನು ಹೊರತುಪಡಿಸಿ ಉಳಿದ ಸಹಕಾರಿ ಸಂಘಗಳ ಚುನಾವಣೆ ನಡೆಸಲು ಒಪ್ಪಿಗೆ.
- ಕರ್ನಾಟಕ ಉಪ ಖನಿಜ ನಿಯಮಾವಳಿ ಬದಲಿಸಲಾಗಿದೆ.
- ಇಂದಿರಾ ಕ್ಯಾಂಟೀನ್ ದರ ಹೆಚ್ಚಿಸುವ ಬಗ್ಗೆ ಮುಂದಿನ ಸಂಪುಟಸಭೆಯಲ್ಲಿ ತೀರ್ಮಾನ.

## ಗ್ರಾಪಂಗಳಿಗೆ ಆಡಳಿತಾಧಿಕಾರಿಗಳ ನೇಮಕ

ಇನ್ನು ಭಾರಿ ವಿವಾದಕ್ಕೆ ಕಾರಣವಾಗಿದ್ದ ಗ್ರಾಮ ಪಂಚಾಯಿತಿಗೆ ಸದಸ್ಯರ ನೇಮಕಕ್ಕೆ ವಿಷಯದಲ್ಲಿ ಸರಕಾರ ತನ್ನ ನಿಲುವನ್ನು ಬದಲಿಸಿಕೊಂಡಿದೆ. ಈ ಹಿಂದೆ ಗ್ರಾಮ ಪಂಚಾಯತಿಗಳಿಗೆ ಸದಸ್ಯರನ್ನು ಸರಕಾರದಿಂದಲೇ ನೇಮಿಸಲಾಗುವುದು ಎಂದು ಹೇಳಲಾಗಿತ್ತು. ಇದಕ್ಕೆ ಪ್ರತಿಪಕ್ಷಗಳ ವಿರೋಧ ವ್ಯಕ್ತವಾಗಿದ್ದರಿಂದ ಆಡಳಿತಾಧಿಕಾರಿಯನ್ನು ನೇಮಿಸಲು ನಿರ್ಧರಿಸಿದೆ. ಈ ಬಗ್ಗೆ ಮಾತನಾಡಿದ ಮಾಧುಸ್ವಾಮಿ, 'ರಾಜ್ಯದಲ್ಲಿ ಕೋವಿಡ್-19 ಸೋಂಕು ಇರುವ ಕಾರಣ ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ಮುಂದೂಡಲಾಗಿದ್ದು, ಚುನಾವಣೆ ನಡೆಯಬೇಕಿದ್ದ ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಲು ಸಂಪುಟ ಸಭೆ ಒಪ್ಪಿಗೆ ನೀಡಿದೆ' ಎಂದು ಸ್ಪಷ್ಟಪಡಿಸಿದರು.

## ವ್ಯಾಪಾರಿಗಳು ಹೂಡಿಕೆ ಮಾಡುವ ಸಾಧ್ಯತೆ

**ರಾಜ್ಯ ಸರಕಾರ ಯಾವುದೇ ಆದಾಯ ಮಿತಿ ಇಲ್ಲದೇ ಕೃಷಿ ಭೂಮಿ ಖರೀದಿಗೆ ಅವಕಾಶ ನೀಡಿರುವುದರಿಂದ, ಮುಂದಿನ ದಿನಗಳಲ್ಲಿ ಕೃಷಿ ಭೂಮಿಯನ್ನು ಉದ್ಯಮಿಗಳು ಹಾಗೂ ರಿಯಲ್ ಎಸ್ಟೇಟ್‌ನವರು ಖರೀದಿಸುವ ಸಾಧ್ಯತೆಯಿದೆ. ಆರಂಭಿಕ ದಿನಗಳಲ್ಲಿ ಕೃಷಿ ಚಟುವಟಿಕೆಗೆ ಜಮೀನು ಖರೀದಿಸಲಾಗುತ್ತದೆ ಎಂದು ತೋರಿಸಿದರೂ, ನಂತರ ಇದನ್ನು ರಿಯಲ್ ಎಸ್ಟೇಟ್‌ಗೆ ಬಳಸಿಕೊಳ್ಳುವುದನ್ನು ಅಲ್ಲಗಳೆಯುವಂತಿಲ್ಲ. ಈ ರೀತಿಯಾದರೆ, ಭವಿಷ್ಯದಲ್ಲಿ ಕೃಷಿ ಚಟುವಟಿಕೆಗೆ ಭೂ ಕೊರತೆ ಎದುರಾದರೂ ಅಚ್ಚರಿಪಡಬೇಕಿಲ್ಲ ಎನ್ನುವ ಮಾತನ್ನು ಕೃಷಿ ತಜ್ಞರು ಹೇಳಿದ್ದಾರೆ.**